# ಮಹಿಳೆಗೆ ಪಾತ್ರ ವೈವಿಧ್ಯ ಕಡಿಮೆ

**ಪಲ್ಲವಿ ಜಿ.**

ಝೀ ಕನ್ನಡದ 'ಜೋಡಿಹಕ್ಕಿ'ಯ ನಂದಿತಾ

★ *ನೆಗೆಟಿವ್ ಪಾತ್ರ ನಿರ್ವಹಿಸುವಾಗ ಅನ್ನಿಸಿದ್ದು ಹೇಗೆ?*

ಈ ರೀತಿಯ ನೆಗೆಟಿವ್ ಪಾತ್ರ ನನಗೆ ಹೊಸತು. ಸ್ವಭಾವತಃ ನನ್ನ ಮನೋಸ್ಥಿತಿಗೆ ವಿರುದ್ಧ ಇರುವಂತದ್ದು. ನನಗೂ ಕೋಪ ಇದೆ, ಕಿರುಚುತ್ತೇನೆ. ದ್ವೇಷ ಇಲ್ಲ. ಯಾರನ್ನೂ ಗದರಿಸುವುದಿಲ್ಲ. ಕಾರ್ಯ ಸಾಧನೆಗೆ ತಂತ್ರಗಳನ್ನು ಹೆಣೆಯುವುದಿಲ್ಲ. ಆದರೆ ನಂದಿತಾ ಆಗಿ ಅವೆಲ್ಲವನ್ನೂ ಮಾಡಬೇಕು. ಆಕೆಯ ಮಾತು ನಡೆಯದಿದ್ದಾಗ ಉಗ್ರರೂಪದಲ್ಲಿ ಕಾಣಿಸಿಕೊಳ್ಳಬೇಕು. ನಾನಲ್ಲದ ನನ್ನ ಗುಣವನ್ನು ತೋರಿಸುವುದು ನಿಜಕ್ಕೂ ಸವಾಲಾಗುತ್ತದೆ. ಮೊದಲಿನಿಂದಲೂ ಸೌಮ್ಯ ಸ್ವಭಾವವನ್ನೇ ನಿರ್ವಹಿಸಿದ ನಾನು ಬಜಾರಿ (ನಂದಿತಾ) ಪಾತ್ರ ಒಪ್ಪಿಕೊಂಡಾಗ ತುಂಬಾ ಜನ ವಿರೋಧಿಸಿದರು. ನನಗೆ ಅಂತಹ ಪಾತ್ರ ಹಿಡಿಸುವುದಿಲ್ಲ ಎಂದೂ ಹೇಳಿದರೂ. ಇದೊಂದು ಅವಕಾಶ ಎಂದೇ ಈ ಪಾತ್ರವನ್ನು ತೆಗೆದುಕೊಂಡಿದ್ದೇನೆ. ಒಂದು ಮನೆಗೆ ಸೊಸೆಯಾಗಿ ಬಂದ ನಂದಿತಾಳಿಗೆ ಮತ್ತೊಬ್ಬರು ಯಾರೂ ಆ ಮನೆಗೆ ಸೊಸೆಯಾಗಿ ಬರಬಾರದು ಎನ್ನುವ ಬಯಕೆ. ತನ್ನ ಮಾತೇ ನಡಿಯಬೇಕು ಎನ್ನುವ ಹಪಾಹಪಿ. ಅದೇ ಮನೆಗೆ ಮತ್ತೊಬ್ಬ ಸೊಸೆ ಕಾಲಿಟ್ಟಿದ್ದಾಳೆ. ಅವಳ ಜೊತೆಗಿನ ಸಂಘರ್ಷವೇ ಕಥೆಯನ್ನು ಮುಂದುವರಿಸುತ್ತದೆ.



★ *ಕ್ಯಾನ್ವಾಸ್ ಮೇಲೆ ಬಣ್ಣ ಮೂಡಿಸಬೇಕಾದವರು ಬಣ್ಣದ ಲೋಕದ ಪರಿಧಿಯಲ್ಲಿ ಬಂಧಿಯಾಗಿದ್ದು ಹೇಗೆ?*

ಶಾಲಾ ದಿನಗಳಿಂದಲೂ ರ್‍ಯಾಂಕ್ ವಿದ್ಯಾರ್ಥಿ ನಾನಲ್ಲ. ಪಠ್ಯದ ಓದಿಗಿಂತ ಕ್ರೀಡೆ ನನ್ನ ಆಯ್ಕೆಯಾಗಿತ್ತು. ತರಗತಿಯಲ್ಲಿ ಕೊನೆಗಿದ್ದರೆ ಆಟದ ಮೈದಾನದಲ್ಲಿ ಮುಂದಿರುತ್ತಿದ್ದೆ. ಅದರ ಜೊತೆಗೆ ಡಾನ್ಸ್ ಅಭ್ಯಾಸ ಮಾಡುತ್ತಿದ್ದೆ. ಡ್ರಾಯಿಂಗ್ ಮಾಡುತ್ತಿದ್ದಳು ಅನಿಮೇಷನ್ ಕಲಿಯಲು ಆರಂಭಿಸಿದೆ. ಒಮ್ಮೆ ತರಗತಿ ಮುಗಿಸಿ ಬರುವಾಗ ಸರಿಗಮ ವಿಜಯ್ ಅವರು ಅಭಿನಯದ ಪ್ರಸ್ತಾಪವನ್ನು ಇಟ್ಟರು. 'ಮನೆಯೊಂದು ಮೂರು ಬಾಗಿಲು'ನಲ್ಲಿ ಅವಕಾಶವೂ ಸಿಕ್ಕಿತು. ಮೊದಲ ದಿನ ಕ್ಯಾಮೆರಾ ಎದುರಿಸಿದಾಗ ಆದ ಮಾನಸಿಕ ಒತ್ತಡ, ತೊಳಲಾಟದಲ್ಲಿ ಜ್ವರ ಏರಿತ್ತು. ನಟನೆಯ ಮೂಲ ತತ್ವಗಳೇ ಗೊತ್ತಿಲ್ಲ. ಆ ಬಗ್ಗೆ ತರಬೇತಿಯೂ ನನಗಿಲ್ಲ. ಗೊತ್ತಿಲ್ಲದ ಕ್ಷೇತ್ರಕ್ಕೆ ನಾನೇಕೆ ಬಂದೆ ಎನ್ನುವ ಚಿಂತೆ ಕಾಡುತ್ತಿತ್ತು. ನಮ್ಮ ತಂಡದ ಸದಸ್ಯರ ಪ್ರೋತ್ಸಾಹದಿಂದ ಮುಂದುವರಿದೆ.

★ *ಸಿನಿಮಾ–ಸೀರಿಯಲ್ ಎಂಬ ಎರಡು ಪಥದ ಪಯಣ ಹೇಗೆನಿಸುತ್ತದೆ?*

ಅಭಿನಯವೇ ನನ್ನ ಆಯ್ಕೆ ಆಗಿರಲಿಲ್ಲ. ಆಕಸ್ಮಿಕವಾಗಿ ಬಂದಿದ್ದರೂ ಅದು ಕಿರುತೆರೆಗೆ ಸೀಮಿತ ಎಂದು ಭಾವಿಸಿದ್ದೆ. 'ಪ್ರೇಮಗೀಮ ಜಾನೆದೋ'ಮೊದಲ ಸಿನಿಮಾ ಮಾಡಿದೆ. ಇತ್ತೀಚೆಗೆ 'ಕಿಡಿ'ಯಲ್ಲಿ ನಟಿಸಿದ್ದೇನೆ. ಆನಂತರ ಅವಕಾಶಗಳಂತೂ ಬರುತ್ತಿವೆ. ಆದರೆ ಯಾವುದಕ್ಕೂ ಒಪ್ಪಿಲ್ಲ. ಒಂದು ಸಣ್ಣ ಬ್ರೇಕ್ ಬೇಕು ಅನ್ನಿಸಿ 'ಜೋಡಿಹಕ್ಕಿ' ಒಂದನ್ನೇ ಮಾಡುತ್ತಿದ್ದೇನೆ. ಮಹಿಳೆಗೆ ವೈವಿಧ್ಯ ಪಾತ್ರಗಳು ತೀರಾ ಕಡಿಮೆ. ಏಕತಾನತೆಯ ಗುಣಗಳೇ ಹೆಚ್ಚು. ಹೀಗಿರುವಾಗ ಭಿನ್ನ ಎನಿಸುವ ಪಾತ್ರ ಸಿಕ್ಕಾಗ ಬಿಡಲು ಮನಸ್ಸು ಒಪ್ಪುವುದಿಲ್ಲ. ನಾನು ಪಾತ್ರವನ್ನು ಆ್ಯಕ್ಟ್ ಮಾಡುವುದಿಲ್ಲ. ರಿಯಾಕ್ಟ್ ಮಾಡುತ್ತೇನೆ. ಸೀರಿಯಲ್ ಶಾಲೆ ಇದ್ದಂತೆ. ಸಿನಿಮಾ ಕಾಲೇಜು ಇದ್ದಂತೆ. ಶಾಲಾ ವಿದ್ಯಾರ್ಥಿಗೆ ಕಾಲೇಜಿಗೆ ಹೋಗುವ ಕನವರಿಕೆ ಕಾಡುತ್ತದೆ. ಕಾಲೇಜಿಗೆ ಹೋದ ಮೇಲೆ ಶಾಲೆಯೇ ಚೆಂದ ಇತ್ತು ಎನ್ನಿಸತೊಡಗುತ್ತದೆ.

★ *ನಟಿಯಾದ ನಂತರ ಸಹಜೀವಿಗಳ ಪ್ರತಿಸ್ಪಂದನೆಯ ಬಗ್ಗೆ ಹೇಳುವುದಾದರೆ...*

ಜನರ ನಿಸ್ವಾರ್ಥದ ಅಭಿಮಾನವನ್ನು ನಾನು ಕಂಡಿದ್ದೇನೆ. ನಾನು ಸಾಯಿಬಾಬಾ ಭಕ್ತೆ. ತೆಲುಗು ಧಾರಾವಾಹಿಯಲ್ಲಿ ನಟಿಸಿದ ನಂತರ ಶಿರಡಿಗೆ ಹೋಗಿದ್ದೆ. ಒಮ್ಮೆ ಹೈದ್ರಾಬಾದ್‌ನ ಭಕ್ತರು ಬಂದು ನನ್ನ ಕ್ಷೇಮವನ್ನು ವಿಚಾರಿಸಿದರು. ಆರೋಗ್ಯದ ಬಗ್ಗೆ ಕಾಳಜಿ ತೆಗೆದುಕೊಳ್ಳುವಂತೆ ಹೇಳಿದರು. ಕಾರಣ ಕಥೆಯಲ್ಲಿ ನನ್ನ ಆರೋಗ್ಯ ಹದಗೆಟ್ಟಿತ್ತು. ಬೆಂಗಳೂರಿನಲ್ಲಿ ಒಬ್ಬರು ಬೈಕಿನಲ್ಲಿ ಹೋಗುತ್ತಿದ್ದವರು. ಎದುರಿಗೆ ಬಂದು ಗಾಡಿ ನಿಲ್ಲಿಸಿ ನನ್ನ ಕೈಯನ್ನು ಹಿಡಿದುಕೊಂಡರು. ಆಕ್ಷಣಕ್ಕೆ ನಾನು ತಬ್ಬಿಬ್ಬಾದೆ. ಒಂದೆರಡು ನಿಮಿಷ ಆ ಭಯದಿಂದ ಹೊರಬರಲು ಸಾಧ್ಯವೇ ಆಗಲಿಲ್ಲ. ಕೈ ಹಿಡಿದ ಮಹಿಳೆ 'ನೀವು ನಂದಿತಾ ಅಲ್ವೇನ್ರೀ? ಏನ್ರೀ ಗೊತ್ತೇ ಆಗುವುದಿಲ್ಲ. ತೆರೆಯಲ್ಲಿ ಕಾಣಸಿದಂತೆ ಇಲ್ಲ ಬಿಡ್ರಿ' ಎಂದರು. ಇನ್ನೂ ಕೆಲವರು ಬೇರೆ ಬೇರೆ ಊರುಗಳಿಂದ ಚಿತ್ರೀಕರಣದ ಸ್ಥಳಕ್ಕೆ ಬಂದು ಮಾತನಾಡಿಸುತ್ತಾರೆ. ಸೆಲ್ಫಿ ತೆಗೆದುಕೊಳ್ಳುತ್ತಾರೆ. ಇದೆಲ್ಲವನ್ನು ಒಬ್ಬ ನಟಿಯಾಗಿ ಖುಷಿ ಪಡುತ್ತೇನೆ.

■ **ರಾಘವೇಂದ್ರ**